ಅ)

| | | ಗ್ರಾಮಗಳು |
|---|---|---|
| ಶಿವಮೊಗ್ಗ | — | ೧೦೪ |
| ಚನ್ನಗಿರಿ | — | ೧೭೨ |
| ಹೊನ್ನಾಳಿ | — | ೧೦೧ |
| ಶೀರ್ಥಹಳ್ಳಿ | — | ೧೫೦ |
| ಶಿಕಾರಿಪುರ | — | ೮೪ |
| ಸಾಗರ | — | ೫೩ |
| ಸೊರಬ | — | ೮೩ |
| ಹೊಸನಗರ | — | ೨೦ |
| | ಒಟ್ಟು | ೭೩೭ |

ಆ)

| | | ಗ್ರಾಮಗಳು |
|---|---|---|
| ಶಿವಮೊಗ್ಗ | — | ೩ |
| ಹೊನ್ನಾಳಿ | — | ೧೪ |
| ಶಿಕಾರಿಪುರ | — | ೭ |
| ಸೊರಬ | — | ೫ |
| ಹೊಸನಗರ | — | ೧ |
| | ಒಟ್ಟು | ೩೦ |

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ, ಉತ್ತರಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ, ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

## ರಾಜ್ಯದಲ್ಲಿ ಮುಚ್ಚಿರುವ ಕೈಗಾರಿಕಾ ಉದ್ದಿಮೆಗಳ ಬಗ್ಗೆ

೧ (೯೧ (೩) ಶ್ರೀ ಆರ್, ವೆಂಕಟರಾಮ್ಯ (ಮುಳಬಾಗಿಲು).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಳೆದ ೩ ವರ್ಷಗಳಿಂದ ರಾಜ್ಯದಲ್ಲಿ ದೊಡ್ಡ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳ ಮುಚ್ಚುರಗಳ, ಲಾಕೌಟ್‌ಗಳ ಹಾಗೂ ಲೇ ಆಫ್‌ಗಳಿಂದ ಕಳೆದುಕೊಂಡ ಮಾನವ ದಿನಗಳೆಷ್ಟು. ಹಾಗೂ ರಿಟ್ರೆಂಚ್‌ಮೆಂಟ್‌ಗಳಿಂದ ಕೆಲಸ ಕಳೆದುಕೊಂಡ ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಮುಚ್ಚಿಹೋದ ಕೈಗಾರಿಕೆಗಳನ್ನು ತೆರೆಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ)

| ವಿವರಗಳು | ೧೯೮೪ | | ೧೯೮೫ | | ೧೯೮೬ | |
|---|---|---|---|---|---|---|
| | ಸಂಖ್ಯೆ | ಮಾನವದಿನ ನಷ್ಟ | ಸಂಖ್ಯೆ | ಮಾನವದಿನ ನಷ್ಟ | ಸಂಖ್ಯೆ | ಮಾನವದಿನ ನಷ್ಟ |
| ೧ | ೨ | ೩ | ೪ | ೫ | ೬ | ೭ |
| ಮುಷ್ಕರ | ೩೨ | ೫೮೭೦೨೬ | ೨೫ | ೩೮೪೫೦೪ | ೩೧ | ೧೨೧೭೬೭ |
| ಬೀಗಮುದ್ರೆ | ೭ | ೩೦೧೧೫೫ | ೮ | ೬೨೮೨೫ | ೬ | ೯೪೯೬೦ |
| ವಿಸರ್ಜನೆ | ೨೫ | ೬೧೬೫೩ | ೨೦ | ೧೩೩೨೫೯ | ೨೪ | ೩೭೩೩೫೪ |

| ವಿವರಣೆಗಳು | ೧೯೮೪ | | ೧೯೮೫ | | ೧೯೮೬ | |
|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ಭಾದಿತ ಕೆಲಸಗಾರರ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಭಾದಿತ ಕೆಲಸಗಾರರ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಭಾದಿತ ಕೆಲಸಗಾರರ ಸಂಖ್ಯೆ |
| ೧ | ೨ | ೩ | ೪ | ೫ | ೬ | ೭ |
| ಮುಚ್ಚುವಿಕೆ ತೆಗೆದು | ೧ | ೫೨ | ೨ | ೫೨೧ | ೧ | ೩೦ |
| ಹಾಕುವಿಕೆ | ೨ | ೫೫ | ೨ | ೧೪ | — | — |

ಆ) ಕೈಗಾರಿಕೆ ಮತ್ತು ಕಾರ್ಮಿಕ ವರ್ಗಗಳಿಗೆ ಅನ್ವಯವಾಗುವ ಕಾಯಿದೆಗಳ ಕೆಳಗೆ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ. ಅವುಗಳು

೧. ವಿವಾದ ಬಗೆಹರಿಸಲು ಸಂಧಾನ ನಡೆಸುವುದು.

೨. ಸಂವಿಧಾನ ವಿಫಲವಾದಲ್ಲಿ ವಿವಾದವನ್ನು ಕಾರ್ಮಿಕ ನ್ಯಾಯಾಲಯಕ್ಕೆ ತೀರ್ಪಿಗೆ ಒಪ್ಪಿಸುವುದು.

೩. ಮುಷ್ಕರ, ಲಾಕೌಟ್ ಅವುಗಳನ್ನು ಕಾಲಕಾಲಕ್ಕೆ ನಿಷೇದಿಸುವುದು.

೪. ಕೈಗಾರಿಕೆಗಳು ತಮ್ಮ ಉದ್ಯಮಗಳನ್ನು ಮುಚ್ಚಲು ಅನುಮತಿ ನಿರಾಕರಿಸುವುದು.

೫. ಹಣ ಸಹಾಯ ಮತ್ತಿತರ ಸಹಾಯ ಒದಗಿಸುವುದು.

ಅನುಮತಿ ನಿರಾಕರಣೆಯ ಆಜ್ಞೆಯನ್ನು ಕೆಲವು ಉದ್ಯಮಿಗಳು ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿ ಆದು ರಾಜ್ಯಾಂಗಬಾಹಿರವೆಂದು ತೀರ್ಪು ಆಗಿದೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯದ ಮನವಿಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಅಂತಿಮ ಇತ್ಯರ್ಥಕ್ಕಾಗಿ ಇದೆ.

## ರಾಜ್ಯದಲ್ಲಿರುವ ಅಂಗನವಾಡಿಗಳ ಬಗ್ಗೆ

೨ (ಸಿ) ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ)—.ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ? ಹಾಗೂ ಇದರಲ್ಲಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು ?